1	2	3	4
8.	Siddapura	860000	Yogeeshwar G.R.
9.	Sirsi	2536533	Venkata Reddy P
10.	Supa	450999	Vasanth P. Madar
11.	Yellapur	1487601	Smt. Sudhanalini
	Total	**16010743**	
	Grand Total	**733020672**	

Bangalore Urban District includes 4 taluks ie Bangalore North, South, East and Anekal Taluks, Raichur is yet to be disposed of.

ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕಿನ ರೈತರುಗಳಿಗೆ ಪಕ್ಕಾಪೋಡಿ ಸರ್ವೆ

232(130) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುಗಳಲ್ಲಿ ಪಕ್ಕಾಪೋಡಿ ಸರ್ವೆ ಮಾಡಿ ಸರ್ವೆ ನಂಬರುಗಳನ್ನು ಗುರುತಿಸುವ ಎಷ್ಟು ಪ್ರಕರಣಗಳು ಬಾಕಿ ಇವೆ ಹಾಗೂ ಬಾಕಿ ಇರಲು ಕಾರಣಗಳೇನು;

ಆ) ದಕ್ಷಿಣ ಕನ್ನಡ ಜಿಲ್ಲೆಯ ಭೂನ್ಯಾಯ ಮಂಡಳಿಯಲ್ಲಿ ಗೇಣಿದಾರರಿಗೆ ಮಂಜೂರಾದ ಪ್ರಕರಣಗಳ ಒಟ್ಟು ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಇ) ಇಂತಹ ಪ್ರಕರಣಗಳಲ್ಲಿ ಪಕ್ಕಾ ಪೋಡಿ ಸರ್ವೆ ಮಾಡಲಾಗಿರುವ ಪ್ರಕರಣಗಳೆಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ದಿನಾಂಕ 30-6-2004ರ ಅಂತ್ಯಕ್ಕೆ ಪಕ್ಕಾಪೋಡಿ ಸರ್ವೆಗಾಗಿ ಬಾಕಿ ಇರುವ ಒಟ್ಟು ಪ್ರಕರಣಗಳು-18,859
ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

1.	ಮಂಗಳೂರು	5,614
2.	ಬಂಟ್ವಾಳ	1,450
3.	ಪುತ್ತೂರು	2,366
4.	ಸುಳ್ಯ	5,381
5.	ಬೆಳ್ತಂಗಡಿ	4,048

ಬಾಕಿ ಇರಲು ಕಾರಣಗಳು:-

1. ಕಛೇರಿಯಲ್ಲಿ ಸ್ವೀಕೃತವಾಗುವ ಹಾಗೂ ವಿಲೇ ಆಗುವ ಪೋಡಿ ಕಡತಗಳ ಸಂಖ್ಯೆ ಸಮವಾಗಿದ್ದು ಪ್ರಾರಂಭ ಶಿಲ್ಕುದಷ್ಟು ಪ್ರಕರಣಗಳು ಬಾಕಿ ಉಳಿಯುವಂತಾಗಿದೆ.

2. 8 ಜನ ಭೂಮಾಪಕರ ಹಾಗೂ 1 ಪರ್ಯಾವೇಕ್ಷಕರ ಹುದ್ದೆ ಖಾಲಿ ಇರುತ್ತದೆ.

3. ಹಲವು ಬಾರಿ ಅಳತೆಗೆ ಭೂಮಾಲೀಕರ ಅಸಹಕಾರದಿಂದ ಪ್ರಕರಣಗಳು ವಿಲೇಯಾಗಲು ವಿಳಂಬವಾಗುತ್ತಿದೆ.

4. ವಿಸ್ತೀರ್ಣ ವ್ಯತ್ಯಾಸ, ಇತ್ಯಾದಿ ನ್ಯೂನತೆಗಳ ಕಾರಣದಿಂದ ಕಂದಾಯ ಕ್ರಮದ ಬಳಿಕ ವಿಲೇವಾರಿಯಾಗುವುದರಿಂದಲೂ ವಿಳಂಬವಾಗಿ ಬಾಕಿಗೆ ಕಾರಣವಾಗುತ್ತದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಸುಧಾರಣಾ ಕಾಯ್ದೆಯ ಕಲಂ 48(ಎ) ರಡಿ ಸ್ವೀಕೃತವಾದ ಒಟ್ಟು ಗೇಣಿ ಅರ್ಜಿಗಳು–1,05,942 ಈ ಎಲ್ಲಾ ಮೂಲ ಅರ್ಜಿಗಳನ್ನು ಇತ್ಯರ್ಥಗೊಳಿಸಲಾಗಿದೆ.

ಈ ಪೈಕಿ ಗೇಣಿದಾರರ ಪರ ಇತ್ಯರ್ಥವಾದ ಪ್ರಕರಣಗಳು–69,826

ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

1.	ಮಂಗಳೂರು	23,846
2.	ಬಂಟ್ವಾಳ	22,393
3.	ಪುತ್ತೂರು	8,100
4.	ಸುಳ್ಯ	2,931
5.	ಬೆಳ್ತಂಗಡಿ	12,556

ಇ) ದಿನಾಂಕ 1–4–99 ರಿಂದ 31–3–2004ರವರೆಗೆ ಪಕ್ಕಾ ಪೋಡಿ ಸರ್ವೆ ಮಾಡಲಾಗಿರುವ ಪ್ರಕರಣಗಳು.

	ತಾಲ್ಲೂಕು	ಭೂಸುಧಾರಣೆ
1.	ಮಂಗಳೂರು	1563
2.	ಬಂಟ್ವಾಳ	1167
3.	ಪುತ್ತೂರು	470
4.	ಸುಳ್ಯ	174
5.	ಬೆಳ್ತಂಗಡಿ	1019
	ಒಟ್ಟು	**4393**

ಉಡುಪಿ ಹಾಗೂ ದ.ಕ. ಜಿಲ್ಲೆಗಳಲ್ಲಿ ಆರಾಧನ ಯೋಜನೆ

233 (132) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ಏಟ್ಲ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2002–2003 ಮತ್ತು 2003–2004ನೇ ಸಾಲಿನಲ್ಲಿ ಆರಾಧನ ಯೋಜನೆಯಲ್ಲಿ ಮಂಜೂರಾದ ಹಣದ ಒಟ್ಟು ಮೊತ್ತವೆಷ್ಟು;

ಆ) ಸದರಿ ಸಾಲುಗಳಲ್ಲಿ ಆರಾಧನ ಯೋಜನೆಯಡಿಯಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಮಂಜೂರಾಗಿ ಬಿಡುಗಡೆಯಾದ ಹಣವೆಷ್ಟು (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಆರಾಧನ ಯೋಜನೆಯಡಿ ಮಂಜೂರಾದ ಹಾಗೂ ಬಿಡುಗಡೆ ಮಾಡಿದ ಹಣದ ವಿವರ ಈ ಕೆಳಕಂಡಂತೆ ಇರುತ್ತದೆ:–